

ಆ ಹೆಣ್ಣುಮಗಳನ್ನು ಕುರಿತು, ಅದೂ ಮಹತ್ವದ ಅಧಿಕಾರದ ಕೇಂದ್ರದಲ್ಲಿರುವ ಮಹಿಳೆಯನ್ನು ಕುರಿತು ಬಳಸಲಾದ ಭಾಷೆ ಮತ್ತು ಅದರ ಹಿಂದಿನ ದೃಷ್ಟಿಕೋನ ಎರಡೂ ಅನಾಗರಿಕ ಮತ್ತು ಅಸಾಮಾಜಿಕ ಎಂದು ತಿಳಿದಿದ್ದೂ ಅದಕ್ಕೆ ತಾನು ಕ್ಷಮೆ ಕೋರಬೇಕಾಗಿಲ್ಲ, ಬಹಳವೆಂದರೆ ಅದಕ್ಕಾಗಿ ವಿಷಾದ ವ್ಯಕ್ತಪಡಿಸಬಲ್ಲೆ ಎನ್ನುವ ಭಂಡತನ ಪ್ರಭುತ್ವದ ಅಧಿಕಾರದಿಂದ ದತ್ತವಾದುದು. ಮೂರನೆಯದು, ಇದರ ಬಗ್ಗೆ ಗೊಣಗುವುದು, ವಿಷಾದಿಸುವುದು, ಉಗ್ರವಾಗಿ ಘೋಷಣೆಗಳನ್ನು ಕೂಗಿ ನಮ್ಮ ಅಸಹನೆಗೊಂದು ಪ್ರತಿರೋಧದ ಸಾರ್ವಜನಿಕ ಭಾಷೆಯ ಪ್ರಯೋಗವನ್ನು ನಿಷ್ಫಲವಾಗಿ ವ್ಯಕ್ತಪಡಿಸುವುದು.

ಹೆಣ್ಣನ್ನು ಮಾತನಾಡಿಸಲು ಈ ವ್ಯವಸ್ಥೆಯು 'ಭಾಷೆಯೊಳಗೊಂದು ಭಾಷೆ'ಯನ್ನು ರೂಢಿಸಿ ಸ್ಥಾಪಿಸಿಕೊಂಡು ಬಿಟ್ಟಿದೆ. ಅದು 'ದೇಹ ಭಾಷೆ'. ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ, ಅದು 'ಲೈಂಗಿಕ ಭಾಷೆ'. ಹೆಣ್ಣು ಎಂದರೆ ದೇಹ ಎಂದು ತಾನು ಬಯಸುವ, ಒಪ್ಪುವ ವ್ಯಾಖ್ಯಾನವನ್ನು ಅದು ಹೆಣ್ಣೂ ಒಪ್ಪುವಂತೆ ಮಾಡಿಬಿಟ್ಟಿದೆ. ಈಗ ಅದರಿಂದ ಹೊರಬರಬೇಕೆಂದರೆ, ಅದರರ್ಥ ಹೆಣ್ಣು ಮತ್ತು ಗಂಡು ಇಬ್ಬರೂ ಅದರಿಂದ ಹೊರಬರಬೇಕು ಎಂದೇ. ಆದರೆ ಮೇಲಿನ ಅಥವಾ ಅಂತಹ ನೂರಾರು ಘಟನೆಗಳು ನಿತ್ಯ ನಿರಂತರವಾಗಿ ನಡೆಯುತ್ತಲೇ ಇರುತ್ತವೆ ಎನ್ನುವ ವಾಸ್ತವ, ಹೊರಬರುವ ಕ್ರಿಯೆ ಎಷ್ಟು ಕಷ್ಟದ್ದು ಎನ್ನುವುದನ್ನು ಹೇಳುತ್ತವೆ. ಈ ನಿಟ್ಟಿನಲ್ಲಿ ನಾನು ಮತ್ತೆ ಮತ್ತೆ ನೆನಪಿಸಿಕೊಳ್ಳುವ 'ಕುಮಾರವ್ಯಾಸ ಭಾರತ'ದ ಪ್ರಸಂಗವು ಒಂದು ಕ್ಲಾಸಿಕಲ್ ಉದಾಹರಣೆ. ಹೆಣ್ಣು ತನ್ನ ಭಾಷೆಯನ್ನು ಕಟ್ಟಲು, ಲೋಕಕ್ಕೆ ಕಲಿಸಲು ನಡೆಸುವ ಪ್ರಯತ್ನ ಮತ್ತು ಲೋಕ ಅದನ್ನು ವಿರೋಧಿಸುವ ಕ್ರಮ ಎರಡನ್ನೂ ಈ ಪ್ರಸಂಗ ಹೇಳುತ್ತದೆ.

'ಸ್ತ್ರೀಮತವನುತ್ತರಿಸಲಾಗದೆ ಧರ್ಮಶಾಸ್ತ್ರದೊಳ್' ಎನ್ನುವ ದ್ರೌಪದಿಯ ಪ್ರಶ್ನೆ ಹೆಣ್ಣಿನ ಸಮಸ್ತ ಪ್ರಶ್ನೆಗಳನ್ನೂ ಸಂಕೇತಿಸುತ್ತಿದೆ. ಸ್ತ್ರೀಮತ ಎನ್ನುವುದು ಹೆಣ್ಣಿನ ವ್ಯಕ್ತಿತ್ವ, ದೇಹ, ಅವಳ ಆಲೋಚನೆ, ಅವಳ ಭಾಷೆ, ಅವಳ ಹಕ್ಕು ಎಲ್ಲವನ್ನೂ ಹೇಳುತ್ತಿದೆ. ಅವಳು ನೈತಿಕ, ಬೌದ್ಧಿಕ ಪ್ರಶ್ನೆಗಳನ್ನು ಮನುಷ್ಯರ ಹಕ್ಕು ಎನ್ನುವಂತೆ ಲೋಕ ಸಮ್ಮತವಾದ 'ಭಾಷೆ'ಯಲ್ಲಿ ಕೇಳಿದರೆ ಅದಕ್ಕೆ ದುರ್ಯೋಧನ ಕೊಡುವ ಉತ್ತರ 'ದೇಹ ಭಾಷೆ'ಯದ್ದು. ತನ್ನನ್ನೇ ಸೋತ ಧರ್ಮರಾಯ ಅದು ಹೇಗೆ ತನ್ನನ್ನು ಪಣಕ್ಕಿಡಲು ಸಾಧ್ಯ ಎನ್ನುವ ನ್ಯಾಯ–ತರ್ಕವನ್ನು ಅಪೇಕ್ಷಿಸುವ ಪ್ರಶ್ನೆಗೆ ಅವಳಿಗೆ ಸಿಗುವ ಉತ್ತರ – 'ಪುಷ್ಪವತಿಯಾದಲ್ಲಿ ಫಲವತಿಯಾಗು ನಡೆ'.

ದ್ರೌಪದಿಯ ಪ್ರಶ್ನೆಗೂ ದುರ್ಯೋಧನನ ಉತ್ತರಕ್ಕೂ ಅರ್ಥಾತ್ ಸಂಬಂಧವಿಲ್ಲ. ಇಲ್ಲಿ ನಿರಾಕರಿಸುತ್ತಿರುವುದು ಕೇವಲ ಅವಳ ಪ್ರಶ್ನೆಯನ್ನಲ್ಲ, ಅವಳ ಹಕ್ಕು, ಅವಳ ಭಾಷೆಯನ್ನೂ ಕೂಡ. ಅದಕ್ಕೆ ಉತ್ತರಿಸಬೇಕಾದ ಅವಶ್ಯಕತೆಯಿದೆ ಎಂದೇ ಅವನು ಭಾವಿಸುವುದಿಲ್ಲ. ನನ್ನ ಗಮನ ಇರುವುದು ದುರ್ಯೋಧನ, ವಿದುರ, ಭೀಷ್ಮ, ಧರ್ಮರಾಯ, ಅರ್ಜುನ, ಧೃತರಾಷ್ಟ್ರ ಮೊದಲಾದವರೆಲ್ಲ ಇರುವ ಸಭೆಯಲ್ಲಿ 'ಗಂಡು' ಭಾಷೆಯಲ್ಲಿ ಉತ್ತರಿಸಲು ಸೋತದ್ದರ ಕಡೆಗೆ, ಮತ್ತು ಇದೆಲ್ಲವನ್ನೂ ನಿರೀಕ್ಷಿಸಿಯೂ ದ್ರೌಪದಿ 'ಹೆಣ್ಣು ಭಾಷೆ'ಯನ್ನು ಅಲ್ಲಿ ಆಡಿದ್ದರ ಬಗೆಗೆ. ಹೆಣ್ಣು ತನ್ನ ಭಾಷೆಯನ್ನು ಆಡಲು ಮತ್ತು ಕೇಳಿಸಲು



**ಹೆಣ್ಣನ್ನು ಮಾತನಾಡಿಸಲು ಈ ವ್ಯವಸ್ಥೆಯು 'ಭಾಷೆಯೊಳಗೊಂದು ಭಾಷೆ'ಯನ್ನು ರೂಢಿಸಿ ಸ್ಥಾಪಿಸಿಕೊಂಡು ಬಿಟ್ಟಿದೆ. ಅದು 'ದೇಹ ಭಾಷೆ'. ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ, ಅದು 'ಲೈಂಗಿಕ ಭಾಷೆ'. ಹೆಣ್ಣು ಎಂದರೆ ದೇಹ ಎಂದು ತಾನು ಬಯಸುವ, ಒಪ್ಪುವ ವ್ಯಾಖ್ಯಾನವನ್ನು ಅದು ಹೆಣ್ಣೂ ಒಪ್ಪುವಂತೆ ಮಾಡಿಬಿಟ್ಟಿದೆ.**